ನಾ ಆಮೇಲೆ ಹೇಳತೇನಿ. ಫಕೀರ ಸಂತಿಗೆ ಹೊಂಟು ನಿಂತಾನ ನೀ ಬುಟ್ಟಿ ಹೊರೆಸಿ ಬಾ ಹೋಗು'' ಅಂದವಳೇ ಮುಂದೆ ಮಾತಾಡಲೂ ಅವಕಾಶ ಕೊಡದಂತೆ ತನ್ನ ತಿಂಗಳ ಪೆನ್ಶನ್ ಕೈಯಲ್ಲಿ ತುರುಕಿದ್ದು ಮರೆಯುವಂಥದ್ದೆ? ಹಣ್ಣಿಗೂ ರೇಟು ಚೆನ್ನಾಗಿ ಬಿದ್ದು ನಾಲ್ವತ್ತು ರೂಪಾಯಿ ಹೆಚ್ಚಿಗೇನೇ ಬಂದಾಗ ಉಳಿದ ರೊಕ್ಕದಲ್ಲಿ ಈ ಪುಸ್ತಕ ಕೊಂಡಿದ್ದ.

ಬದುಕಲ್ಲಿ ಯಾವ ಸುಖವನ್ನೇ ಕಾಣದ ಹತಭಾಗ್ಯೆ ಅಂಬಕ್ಕ. ಹದಿನೆಂಟರ ಕೋಮಲ ಹರೆಯದಲ್ಲೇ ತಲೆ ಬೋಳಿಸಿಕೊಂಡು ಅಣ್ಣನ ಮನೆ ಸೇರಬೇಕಾಗಿ ಬಂದ ದುರ್ಭಾಗ್ಯವನ್ನು ಒಂದಿನ ಹಳಿಯಲಿಲ್ಲ ಅವಳು. ಏನೂ ಆಗೇ ಇಲ್ಲವೆಂಬಂತೆ ಅಣ್ಣನ ಮಕ್ಕಳನ್ನು ತನ್ನವಾಗಿಸಿಕೊಂಡು ತನ್ನದೇ ವಯಸ್ಸಿನ ಅತ್ತಿಗೆಯರನ್ನು ಅಕ್ಕ ತಂಗಿಯರಂತೆ ಕಕ್ಕುಲತೆಯಿಂದ ಕಂಡು ಅವರ ಜಡ್ಡು ಜಾಪತ್ತಿನಲ್ಲಿ ಆರೈಕೆ ಮಾಡಿ ಅವರು ನಕ್ಕಾಗ ಜೊತೆಗೆ ನಕ್ಕು ಅತ್ತಾಗ ಕಣ್ಣೊರೆಸಿದ್ದು, ಕೇವಲ ಅವಳ ಪರಿಸ್ಥಿತಿಯ ಅನಿವಾರ್ಯತೆ ಅನ್ನಲಾದೀತೆ? ಖಂಡಿತ ಇಲ್ಲ, ಅದೊಂದು ದಿವ್ಯ ಸಂಸ್ಕಾರವೇ ಸರಿ. ನಿಟ್ಟುಸಿರಿಟ್ಟ ಕೇಶವ. ಮನೆ ಮಂದಿಯಷ್ಟೇ ಯಾಕೆ ನೆರೆಹೊರೆಯಲ್ಲೂ ಯಾರಿಗೇ ಹೆರಿಗೆ ನೋವು ಬರಲಿ, ಕೂಸಿಗೆ ಕಫ ತುಂಬಿ ಎದೆ ಗಚ್ಚಾಗಲೀ ಅವಳ ಮನೆಮದ್ದು ಕ್ಷಣದಲ್ಲಿ ತಯ್ಯಾರು. ಒಮ್ಮೆ ಪಕ್ಕದ ಮನೆಯ ನಾಲ್ಕರ ತುಂಟ ಸಿದ್ದು ಬಾದಾಮಿ ಕದ್ದು ತಿನ್ನಲು ಹೋಗಿ ಗಂಟಲಲ್ಲಿ ಸಿಕ್ಕಿಹಾಕಿಕೊಂಡು ಉಸಿರುಗಟ್ಟಿದಾಗ ಅವರವ್ವ ದಿಕ್ಕೆಟ್ಟು ಅವನನ್ನೆತ್ತಿಕೊಂಡೇ ಓಡಿ ಬಂದಿದ್ದಳು. ''ಅಂಬಕ್ಕಾ ನೀವ ಏನರೆ ಮಾಡರೆವ್ವಾ'' ಅಂತ ಹುಡುಗನನ್ನು ಅವಳ ಕಾಲ ಮೇಲೆ ಹಾಕಿ ಬಿಟ್ಟಿದ್ದಳು. ಅಲ್ಲೇ ಇದ್ದ ರಾಮಣ್ಣ ಹೆದರಿ ಕಂಗಾಲಾಗಿ ವೈದ್ಯರನ್ನು ಕರೆತರಲು ಓಡಿದರಂತೆ. ಅಂಬಕ್ಕ ಮಾತ್ರ ಹುಡುಗನ ಎರಡೂ ಕಾಲು ಹಿಡಿದು ಅಮಾತ್ತಾಗಿ ಎತ್ತಿ

